ಆಗಿ ತೆಗೆದುಕೊಂಡಿದ್ದಾರೆ. ಕೆರೆಗಳಿಗೆ ನೀರು ಕೊಡಬೇಕೆನ್ನುವ ದೃಷ್ಟಿಯಿಂದ ಡಿಸ್ಟ್ರಿಬ್ಯೂಟರಿ ಗಳನ್ನು ತೆಗೆದುಕೊಂಡಿದ್ದಾರೆ. 150 ಕೆರೆಗಳಿಗೆ ಅದನ್ನು ತೆಗೆದುಕೊಂಡಿದ್ದಾರೆ. ಅದೇ ರೀತಿಯಲ್ಲಿ ಲೈನಿಂಗ್‌ನ್ನೂ ಕೂಡ ವೇಗದಲ್ಲಿ ತೆಗೆದುಕೊಳ್ಳುವುದಕ್ಕೆ ನಾವು ಪ್ರಯತ್ನ ಮಾಡುತ್ತವೆ. ನೀರಾವರಿ ನಿಗಮವನ್ನು ಮಾಡಿ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ, ಈ ಕುರಿತು ಡಿಸ್‌ಪ್ಯೂಟ್ ಇರುವುದರಿಂದ ಮತ್ತೆ ಕಾವೇರಿ ಪ್ರಾಧಿಕಾರ ಮುಂತಾಗಿ ಆಗಿರತಕ್ಕಂಥ ಹಿನ್ನಲೆಯಲ್ಲಿ, ಯಾವರೀತಿಯಲ್ಲಿ ನಾವು ಎರಡು ನಿಗಮಗಳನ್ನು ಮಾಡಿದ್ದೇವೆ. ಇನ್ನು ಮೂರನೆಯದನ್ನು ಹೇಗೆ ಮಾಡಬೇಕೆಂಬ ಬಗ್ಗೆ ಆಲೋಚನೆ ಮಾಡಬೇಕು. ಯಾಕೆಂದರೆ ಇನ್ನೂ ನಮಗೆ 2000 ಕೋಟಿ ರೂ.ಗಳು ಬೇಕು. ಆದ್ದರಿಂದ ಈ ಬಗ್ಗೆ ಆಲೋಚನೆ ಮಾಡುತ್ತೇವೆ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ :— ಮಾನ್ಯ ಅಧ್ಯಕ್ಷರೆ, ಜೂನ್ 1999ಕ್ಕೆ ಕುಣಿಗಲ್ ಕೆರೆಗೆ ನೀರು ಕೊಡುತ್ತೇವೆ ಎಂದು ಮಾನ್ಯ ಸಚಿವರು ಆಶ್ವಾಸನೆಯನ್ನು ಕೊಟ್ಟಿದ್ದು ಅನೇಕ ಸದನದಲ್ಲಿ ಕೂಡ ಹೇಳಿದ್ದರು. ಅದೇ ರೀತಿಯಲ್ಲಿ ತಾವುಗಳು ಕುಣಿಗಲ್‌ನ ಹೆಬ್ಬೂರಿಗೆ ಬಂದಾಗಲೂ ಕೂಡ ಆಶ್ವಾಸನೆಯ ಮಾತುಗಳನ್ನು ಹೇಳಿ ಈಗ ಅದನ್ನು ಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳುತ್ತೀರಿ. ಸರಕಾರದ ಈ ಪ್ರವೃತ್ತಿಯನ್ನು ವಿರೋಧಿಸಿ ನಾನು ಸಭಾತ್ಯಾಗ ಮಾಡುತ್ತೇನೆ.

ಅಧ್ಯಕ್ಷರು :— ಪ್ರಶ್ನೋತ್ತರ ವೇಳೆಯಲ್ಲಿ ಸಭಾತ್ಯಾಗ ಮಾಡುವುದು ಹೊಸ ಪದ್ಧತಿ. ಪ್ರಶ್ನೋತ್ತರ ವೇಳೆಯಲ್ಲಿ ಸಭಾತ್ಯಾ ಮಾಡತಕ್ಕಂಥ ಪದ್ಧತಿಯು ಸಂಸದೀಯ ಪ್ರಜಾಪ್ರಭುತ್ವದಲ್ಲಿ ಎಲ್ಲಿಯೂ ಇಲ್ಲ. ಆ ದಿಸೆಯಲ್ಲಿ ಇವೊತ್ತು ನಾವು ಹೊಸದಾಗಿ ನಾಂದಿ ಹಾಕಿದ್ದೇವೆ. ಮಾನ್ಯ ವಾಟಾಳ್ ನಾಗರಾಜ್‌ರವರು ಪ್ರಾರಂಭ ಮಾಡಿದ್ದಾರೆ. ಅದು ನಡೆದುಕೊಂಡು ಹೋಗುತ್ತದೆ. ಎಲ್ಲಿಯೂ ಸಂಸದೀಯ ಪ್ರಜಾಪ್ರಭುತ್ವದಲ್ಲಿ ಪ್ರಶ್ನೋತ್ತರ ವೇಳೆಯಲ್ಲಿ ಸಭಾತ್ಯಾಗ ಮಾಡುವ ಪದ್ಧತಿಯು ಇಲ್ಲ. ನಮ್ಮಲ್ಲಿಯೇ ಇದು ಮೊದಲು.

ಶ್ರೀ ಎಸ್.ಪಿ. ಹನುಮೇಗೌಡ :— ಮಾನ್ಯ ಅಧ್ಯಕ್ಷರೇ, ತಾವುಗಳು ತಮ್ಮ ಅಭಿಪ್ರಾಯವನ್ನು ಹೇಳಿದ್ದೀರಿ. ಅದನ್ನು ಗೌರವಿಸಿ ನಾನು ಸಭಾತ್ಯಾಗ ಮಾಡುವುದನ್ನು ಹಿಂತೆಗೆದುಕೊಂಡಿದ್ದೇನೆ.

ವಿಷಯ :— ಅಗ್ನಿಶಾಮಕ ಸೇವೆ ಇಲಾಖೆಯಲ್ಲಿ ಅನುಕಂಪದ ನೇಮಕಾತಿಗಳು.

20(46) ಶ್ರೀ ಯು.ಆರ್. ಸಭಾಪತಿ (ಉಡುಪಿ) :— ಮಾನ್ಯ ಬಂದೀಖಾನೆ ಮತ್ತು ಗೃಹರಕ್ಷಕದಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದ ಅಗ್ನಿಶಾಮಕ ಸೇವೆಗಳ ಇಲಾಖೆಯಲ್ಲಿ 1998ರ ಡಿಸೆಂಬರ್ ಅಂತ್ಯವರೆಗೆ ಅನುಕಂಪದ ನೇಮಕಾತಿ ಕೋರಿ ಬಂದ ಅರ್ಜಿಗಳ ಸಂಖ್ಯೆ ಎಷ್ಟು?

ಆ) ಅವುಗಳಲ್ಲಿ ಎಷ್ಟು ಅರ್ಜಿಗಳನ್ನು ಪರಿಶೀಲಿಸಿ ಸರ್ಕಾರದವರು ಉದ್ಯೋಗ ಒದಗಿಸುತ್ತಾರೆ?

ಶ್ರೀ ಶಿವಣ್ಣವರ್ ಬಸವರಾಜ್ ನೀಲಪ್ಪ (ಕಾರಾಗೃಹ, ಗೃಹರಕ್ಷಕ ದಳ, ಸೈನಿಕ ಕಲ್ಯಾಣ ಮತ್ತು ಅಗ್ನಿಶಾಮಕ ಸೇವೆಗಳ ರಾಜ್ಯ ಸಚಿವರು) :—

ಅ) 97

ಆ) 79

ಶ್ರೀ ಯು.ಆರ್. ಸಭಾಪತಿ :— ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸಚಿವರು ಈ ಪ್ರಶ್ನೆಗೆ ನೀಡಿದ ಉತ್ತರವು ಸಂಪೂರ್ಣವಾಗಿ ಸುಳ್ಳು ಎಂದು ತಮ್ಮಲ್ಲಿ ಹೇಳಿಕೊಳ್ಳಬಯಸುತ್ತೇನೆ. ಅಂಕಿ-ಅಂಶಗಳ ಸುಳ್ಳು ಮಾಹಿತಿಗಳನ್ನು ಮಾನ್ಯ ಸಚಿವರು ಕೊಟ್ಟಿದ್ದಾರೆ. ಇದು ಸತ್ಯಕ್ಕೆ ದೂರವಾದುದು ಮತ್ತು ಸುಳ್ಳು ಮಾಹಿತಿಗಳಿಂದ ಕೂಡಿದ್ದಾಗಿದೆ. 12-5-98ರಲ್ಲಿ ಈ ವಿಚಾರದ ಕುರಿತಾಗಿ ನಾನು ಸದನದಲ್ಲಿ ಪ್ರಶ್ನೆಯನ್ನು ಕೇಳಿದ್ದೆ. ಆಗಲೂ ಕೂಡ ಮಾನ್ಯ ಸಚಿವರು ಸತ್ಯಕ್ಕೆದೂರವಾದಂಥ ವಿಚಾರವರನ್ನು ಸದನದಲ್ಲಿ ಮಂಡಿಸಿದ್ದರು. ಅದರ ಬಗ್ಗೆ 15-10-98ರಂದು ವಿಧಾನ ಸಭೆಯ ಕಾರ್ಯದರ್ಶಿಯವರಿಗೆ ನನಗೆ ಈ ಕುರಿತು ಹಕ್ಕುಚ್ಯುತಿ ಆಗಿದೆ ಎಂದು ನನ್ನ ಅಭಿಪ್ರಾಯವನ್ನು ಸಲ್ಲಿಸಿದ್ದೆನು. ಈಗ ಇಲಾಖೆಯ ಬದಲಾದ ಸಚಿವರು ಮತ್ತೆ ಅದೇ ಮಾಹಿತಿಯನ್ನು ಕೊಟ್ಟಿದ್ದಾರೆ. 79 ಜನರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗವನ್ನು ಒದಗಿಸಿದ್ದೇವೆಂದು ಹೇಳಿದ್ದಾರೆ. ಇದು ಸತ್ಯಕ್ಕೆ ದೂರವಾದ ವಿಚಾರವಾದ ಕಾರಣ ನಾನು ಮತ್ತೊಮ್ಮೆ ಹಕ್ಕುಚ್ಯುತಿ ಪ್ರಶ್ನೆಯನ್ನು ಮಂಡಿಸಬೇಕಾಗುತ್ತದೆ. ಯಾಕೆಂದರೆ ಅವರು ಕೊಟ್ಟ ಅಂಕಿಅಂಶಗಳು ಇಲ್ಲವೆಂದು ನಾನು ಹೇಳಬಯಸುತ್ತೇನೆ.

ಅಧ್ಯಕ್ಷರು :— ಮಾನ್ಯ ಸಚಿವರು 79 ಜನರಿಗೆ ಉದ್ಯೋಗವನ್ನು ಒದಗಿಸಲಾಗಿದೆ ಎಂದು ಹೇಳುತ್ತಾರೆ. ನೀವು ಅದನ್ನು ಇಲ್ಲವೆಂದು ಹೇಗೆ ಹೇಳುತ್ತೀರಿ? ಮಂತ್ರಿಗಳು ಅಧಿಕೃತವಾಗಿ ಹೇಳತಕ್ಕಂಥಾದ್ದನ್ನು ನೀವು ಸತ್ಯಕ್ಕೆ ದೂರವಾದುದು ಎಂದು ಹೇಳಲು ನಿಮ್ಮ ಹತ್ತಿರ ಯಾವ ದಾಖಲೇಗಳು ಇವೆ?

ಶ್ರಿ ಯು.ಆರ್. ಸಭಾಪತಿ :— ನನಗೆ ಬಂದ ಖಚಿತ ಮಾಹಿತಿ ಪ್ರಕಾರ ಅಲ್ಲಿ 60 ಜನರಿಗಿಂತ ಹೆಚ್ಚು ಜನರ ನೇಮಕಾತಿಯು ಆಗಿಲ್ಲ.

ಅಧ್ಯಕ್ಷರು :— ಅಲ್ಲಿ 79 ಜನರ ನೇಮಕಾತಿಯ ಆಗಿದ್ದರೆ, ಆ 79 ಜನರ ಹೆಸರುಗಳನ್ನು ಕೊಡಿ ಎಂದು ಮಾನ್ಯ ಸದಸ್ಯರು ಕೇಳಬಹುದು. ಅದನ್ನು

ಇವೊತ್ತೋ, ನಾಳೆಯೋ ಕೊಡಲಿ. ಸರಕಾರದ ಪರವಾಗಿ ಅಧಿಕೃತವಾಗಿ ಉತ್ತರ ಕೊಡತಕ್ಕಂಥ ಅಧಿಕಾರವು ನಮ್ಮ ವ್ಯವಸ್ಥೆಯಲ್ಲಿ ಮಂತ್ರಿಗಳಿಗೆ ಇರುತ್ತದೆ.

ಶ್ರೀ ಯು.ಆರ್. ಸಭಾಪತಿ :— ಮಾನ್ಯ ಸಚಿವರು 79 ಜನರ ನೇಮಕಾತಿಯನ್ನು ಮಾಡಲಾಗಿದೆ ಎಂದು ಹೇಳಿದ್ದಾರೆ. ಆ 79 ಜನರುಗಳ ಹೆಸರುಗಳನ್ನು ನನಗೆ ಒದಗಿಸಿಕೊಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ಅದರ ವಿವರಗಳನ್ನು ನಾಳೆ ಸಭೆಯಲ್ಲಿ ಮಂಡಿಸಲು ತಾವುಗಳು ಆದೇಶಿಸಿ ಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು :— ಹಾಗೆಯೇ ಮಾಡುತ್ತಾರೆ. ಒಂದು ವೇಳೆ ಮಾನ್ಯ ಸದಸ್ಯರು ಹೇಳಿದ ಹಾಗೆ 60 ಜನರ ನೇಮಕಾತಿ ಮಾತ್ರ ಆಗಿದ್ದು 79 ಜನರ ನೇಮಕಾತಿಯು ಆಗಿರದಿದ್ದರೆ, ನಾಳೆ ನೀವು ಹೇಳಿದಂತೆ ನಾನು ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ವಿಷಯ :— ಬೆಂಗಳೂರು ಮಹಾನಗರಪಾಲಿಕೆಗೆ ಹೊಸದಾಗಿ ಸೇರಿಸಿಕೊಳ್ಳಲಾದ ಪ್ರದೇಶಗಳು.

11(51) ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) :— ಮಾನ್ಯ ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೆಂಗಳೂರು ಮಹಾನಗರ ಪಾಲಿಕೆಗೆ ಹೊಸದಾಗಿ ಸೇರಿಸಿಕೊಳ್ಳಲಾದ ಕಂದಾಯ ಪ್ರದೇಶಗಳೆಷ್ಟು?

ಆ) ಸದರಿ ಪ್ರದೇಶದಲ್ಲಿರುವ ನಿವೇಶನಗಳು ಹಾಗೂ ಮನೆಗಳು ಎಷ್ಟು?

ಇ) ಈ ಮನೆಗಳಿಗೆ ನಗರ ಪಾಲಿಕೆ ಖಾತಾ ನೀಡಲು ನಿಶ್ಚಯಿಸಿದೆಯೇ? ಹಾಗಿದ್ದಲ್ಲಿ ಇದುವರೆಗೆ ಅಭಿವೃದ್ಧಿ ಶುಲ್ಕ ಪಾವತಿ ಮಾಡಿ, ಖಾತೆ ಪಡೆದಿರುವವರ ಸಂಖ್ಯೆ ಎಷ್ಟು?

ಈ) ಖಾತೆ ಪಡೆಯದೆ ಇರುವವರ ಮೇಲೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ವಿ. ಸೋಮಣ್ಣ (ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು) :—

ಅ) 189 ಪ್ರದೇಶಗಳು

ಆ) 77 ಸಾವಿರ ಮನೆಗಳು